ಸೂಕ್ತ ರೀತಿಯಲ್ಲಿ ಪರಿಹಾರ ನೀಡತಕ್ಕ ರೀತಿಯಲ್ಲಿ ತಾವು ಕಾರ್ಯಕ್ರಮವನ್ನು ಕೈಗೊಳ್ಳಬೇಕು ಎಂದೂ ನಾವು ತಮ್ಮಲ್ಲಿ ವಿಶೇಷವಾಗಿ ಕೇಳಿಕೊಳ್ಳುತ್ತೇನೆ. ನಾವು ಕೆಲವೊಂದು ಸಾರಿ ಹೋಂ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಸ್ತಾಪಮಾಡಬಹುದು; ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧ ಪಟ್ಟ ವಿಷಯಗಳನ್ನೂ ಪ್ರಸ್ತಾಪ ಮಾಡಬಹುದು. ಆದರೆ ಈ ಎಲ್ಲಾ ವಿಚಾರಗಳಿಗೂ ಸಹ ತಾವು ಪರಿಶೀಲನೆ ಮಾಡುತ್ತೇವೆ, ನೋಡುತ್ತೇವೆಂದು ಹೇಳಿಕೊಂಡು ಹೋದರೆ ಸದಸ್ಯರು ಕೆಲಸ ಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ತಾವುಗಳು ಈ ವಿಚಾರಗಳ ಬಗ್ಗೆ ಸೂಕ್ತ ರೀತಿಯಲ್ಲಿ ಪರಿಶೀಲನೆ ಮಾಡಿ ಯಾವುದಾದರೂ ಒಂದು ನಿರ್ಧಾರಕ್ಕೆ ಬಂದರೆ ಇಂಥ ಸನ್ನಿವೇಶಗಳನ್ನು ತಾವು ನಿವಾರಣೆ ಮಾಡಬಹುದು ಎಂದು ನಾನು ತಮ್ಮ ಮೂಲಕ ಸರ್ಕಾರಕ್ಕೆ ಸೂಚಿಸಬಯಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ತಾವು ಈ ವಿಚಾರಗಳನ್ನು ದಯಾ ದಾಕ್ಷಿಣ್ಯಕ್ಕಾಗಿ ಉತ್ತರ ಕೊಡಬೇಕು ಎಂದು ಭಾವಿಸಿಕೊಂಡು ಉತ್ತರ ಕೊಡುವುದಾದರೆ ನಾವು ಇನ್ನು ಮುಂದೆ ೩೩ಳಿರ ಕೆಳಗೆ ವಿಷಯಗಳನ್ನು ಕಳುಹಿಸಿಕೊಡುವುದನ್ನೇ ಬಿಡಬೇಕಾಗುತ್ತದೆ. ನಾವು ಈ ರೀತಿಯಾಗಿ ಪ್ರತಿ ದಿವಸವೂ ಹೆಚ್ಚಿನ ಅವಕಾಶವನ್ನು ನಮಗೆ ಕೊಡಿ ಎಂದು ಕೇಳುವುದು ತಮಗೂ ಒಂದು ರೀತಿಯಲ್ಲಿ ನಾವು ಸಭಾ ನಿಯಮಾವಳಿಗಳನ್ನು ತಳ್ಳಿಹಾಕುತ್ತಿದ್ದೇವೆಂದು ಅಭಿಪ್ರಾಯ ಬರಬಹುದು. ಏಕೆಂದರೆ ತಾವು ನಮ್ಮನ್ನು ವಿಷಯಗಳನ್ನು ಪ್ರಸ್ತಾಪ ಮಾಡದ ರೀತಿಯಲ್ಲಿ ಮೊಟಕು ಮಾಡುವುದು ಸಮಂಜಸದ ಅಭಾವದ ಕಾರಣದಿಂದ ಎನ್ನುವುದನ್ನು ನಾನೂ ತಿಳಿಯುತ್ತೇನೆ, ಆದರೆ ಸದಸ್ಯರ ಅತಿ ಜರೂರಾದ ವಿಷಯಂಗಳಿಗೆ ಪರಿಹಾರ ಪಡೆಯಲು ಇರುವಂಥ ಮಾರ್ಗಗಳನ್ನು ನಾವು ಬಿಡುವುದು ಸರಿಯಲ್ಲ. ಬೇಕಾದರೆ ಈ ೩೩ಳಿನ್ನೇ ಬಿಟ್ಟುಬಿಡೋಣ.

ಉಪಾಧ್ಯಕ್ಷರು.—ಈ ವಿಚಾರವನ್ನು ಇಲ್ಲಿಗೆ ಮುಂಗಿಸೋಣ, ಶ್ರೀ ಎನ್. ಚಿಕ್ಕೇಗೌಡರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಕೇಳಬಹುದು.

ಹೊಸಕೋಟೆ ತಾಲ್ಲೂಕಿನಲ್ಲಿ ಲೋಡ್‌ಷೆಡ್ಡಿಂಗ್‌ನಿಂದಾಗಿ ರೈತರಿಗೆ ತೊಂದರೆ ಉಂಟಾದ ಬಗ್ಗೆ.

ಶ್ರೀ ಎಚ್. ಚಿಕ್ಕೇಗೌಡ.—ಹೊಸಕೋಟೆ ತಾಲ್ಲೂಕಿನಲ್ಲಿ ಎಲೆಕ್ಟ್ರಿಸಿಟಿ ಬೋರ್ಡ್‌ನವರ ಲೋಡ್ ಷೆಡ್ಡಿಂಗ್‌ನಿಂದಾಗಿ ರೈತರಿಗೆ ಉಂಟಾದ ತೊಂದರೆಯ ಬಗ್ಗೆ ನಾನು ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಚ್. ಪಟೇಲ್ (ವಿದ್ಯುಚ್ಛಕ್ತಿ ಮಂತ್ರಿಗಳು).—

The available energy is being used in the most judicious manner to ensure the water available in Linganamakki and Thattihalla lasts right upto 21st June 1984. As on today, the energy available at Linganamakki Dam is equivalent to 1329 MU and is equivalent to 18.72 MU per day for the balance of 71 days.

The water available at Bommanahalli Thattihalla is equivalent to 83 MU and we can produce energy at about 1 MU per day, till onset of monsoon.

We are continuously getting assistance from Maharastra and some time in the morning also. The total energy supplied by Maharastra during the month of March 1984 is 52 MU. However, from 1st April till today, the energy assistance from this source is only 3 MU because of some internal trouble in the MSEB system.

On the other hand, we are not getting any assistance from APSEB or from Ramagundam Super Thermal Station. The Hydarabad-

Shahabad line work has been test charged but on the Andhra side, some minor works are still being carried out. It is not known when we are going to get power assistance from APSEB or from Ramagundam Super Thermal station. Continuous efforts have been made with the APSEB to pass on the energy, but so for, there has been no response.

As regards Kalapakkam Nuclear Power Station, it is functioning well (4.8 MU per day) and the power available is being consumed by TNEB itself, and in spite of our best efforts, we are not able to get any quota from TNEB.

The Secretary (Energy), Union Government is taking a meeting on 16th April 1984 at Madras, with the Chairman of the Electricity Boards-Southern Region, and the outcome is to be seen.

The load shedding has been brought under control and the load shedding duration was reduced from 5 hours to 4 hours consequent to the re-commissioning of the 10th Unit at Sharavathi on 21-3-1984.

Nonetheless, the unscheduled load shedding is being carried out for short duration in the morning around 5-30 A.M., 11 AM, and 9 PM. as the system capacity is inadequatse to meet the demand during this period.

There is likely to be no change in the power supply position till end of June. Meteorological reports indicate early monsoon; if so, there is no cause for any anxiety during the last week of June 1984.

ಇದರ ಜೊತೆಗೆ ಚಿಕ್ಕೇಗೌಡರ ಪ್ರದೇಶದಲ್ಲಿ ರೈತರಿಗೆ ಆಗತಕ್ಕ ತೊಂದರೆಯ ಬಗ್ಗೆ ಸರ್ಕಾರದ ಗಮನ ಸೆಳೆದಿದ್ದಾರೆ. ಈಗಾಗಲೇ ವಿವರಿಸಿದ ಹಾಗೆ ಬೆಳಿಗ್ಗೆ ೬ ರಿಂದ ೧೧ ಮತ್ತು ಸಂಜೆ ೪ರಿಂದ ೯ ಗಂಟೆಯವರೆಗೆ ನವಂಗೆ ವಂಹಾರಾಷ್ಟ್ರದಿಂದ ಅಥವಾ ಬೇರೆ ರಾಜ್ಯಗಳಿಂದ ಪವರ್ ತೆಗೆದುಕೊಳ್ಳುವುದಕ್ಕೆ ಅವಕಾಶ ಇದೆ. ಜನರೇಟಿಂಗ್ ಸ್ಟೇಷನ್‌ಗಳು ಸಮರ್ಪಕವಾಗಿ ಸಂಜೆ ಮತ್ತು ಬೆಳಿಗ್ಗೆ ಕೆಲಸ ಮಾಡುವ ಕಾಲದಲ್ಲಿ ೫ ಗಂಟೆ ಲೋಡ್ ಷೆಡ್ಡಿಂಗ್ ಇದ್ದುದನ್ನು ೪ ಘಂಟೆಗೆ ಇಳಿಸಲಾಯಿತು. ಈ ಬಗ್ಗೆ ಪ್ರಕಟಣೆ ಮಾಡದೆ ಇದ್ದ ಸಂಧರ್ಭದಲ್ಲಿ ಲೋಡ್ ಷೆಡ್ಡಿಂಗ್ ಆದದ್ದು ಸರ್ಕಾರದ ಗಮನಕ್ಕೆ ಬಂದಿದೆ. ಅದು ಕೆಲವು ದಿನಗಳವರೆಗೆ ಅನಿವಾರ್ಯ; ಆಮೇಲೆ ಸುಧಾರಿಸುತ್ತದೆಂದು ರೈತರಲ್ಲಿ ವಂನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ.— ಆಂಧ್ರ, ಮಹಾರಾಷ್ಟ್ರದಿಂದ ಸಾಕಷ್ಟು ವಿದ್ಯುಚ್ಛಕ್ತಿ ಬಿದ್ದಗುತ್ತಿಲ್ಲವೆಂದು ತಾವು ಹೇಳಿದಿರಿ. ಆಂಧ್ರದಿಂದ, ರಾಮಗುಂಡಂನಿಂದ ೫೦ ಮೆಗಾವ್ಯಾಟ್ ಪವರ್ ಬರುತ್ತದೆಂದು ಹೈದರಾಬಾದ್‌ನಿಂದ ಲೈನ್ ಎಳೆಯುತ್ತಿದ್ದೇವೆ ಮತ್ತು ಅಲ್ಲಿಂದ ಬರತಕ್ಕ ವಿದ್ಯುಚ್ಛಕ್ತಿಯಂನ್ನು ಕೈಗಾರಿಕೋದ್ಯಮಿಗಳಿಗೆ ಕೊಡಬೇಕೆಂದು ಯೋಚನೆ ಮಾಡುತ್ತಿದ್ದೇವೆಂದು ಹೇಳಿದಿರಿ. ಆದರೆ ಇವತ್ತಿನ ದಿವಸ ಅನ್‌ಪೆಡ್ಡೂಲ್ಡ್ ಲೋಡ್‌ಷೆಡ್ಡಿಂಗ್‌ಗೆ ಎಷ್ಟಾಗಿದೆಎಂಬುದನ್ನು ಪವರ್‌ಸ್ಟೇಷನ್‌ಗಳಲ್ಲಿರತಕ್ಕ ಲಾಗ್ ಪುಸ್ತಕ ನೋಡಿದರೆ ಗೊತ್ತಾಗುತ್ತದೆ. ನಾನು ಊರಿನಲ್ಲಿದ್ದ ಕಾಲದಲ್ಲಿ ಕಾಲು ಎಕರೆ ಜಮೀನಿಗೆ ಕೂಡ ಸರಿಯಾಗಿ ನೀರು ಸಿಗಲಿಲ್ಲ. ಭಾರೀ ಉದ್ಯಮದ ಕೈಗಾರಿಕೆಗಳಿಗೆ ಮತ್ತು ರೈತರಿಗೆ ಕೇವಲ ೮—೧೦ ಪರ್ಸೆಂಟ್ ವಿದ್ಯುತ್ ಕೊಡುತ್ತಿದ್ದೀರಿ. ಹಗಲು ಹೊತ್ತಾದರೂ ಸರಿಯಾಗಿ ಕೊಡಿ ಏನು ಕನಿಷ್ಟ ೪ ಗಂಟೆ ಲೋಡ್ ಷೆಡ್ಡಿಂಗ್ ಅಂತ ಬೇರೆ ಅನ್ನುತ್ತೀರಿ. ಆದರೆ ನೀವು ಎಷ್ಟು ಗಂಟೆ ಕಾಲ ವಿದ್ಯುತ್ತನ್ನು ನಿಲ್ಲಿಸುತ್ತೀರಿ ? ಎಂಬುದು ಗೊತ್ತೇ ? ನಮ್ಮ ಹೊಸಕೋಟೆಯಲ್ಲಿ ಟ್ರಾನ್ಸ್ ಫಾರ್ಮರ್ ಸುಟ್ಟು

ಹೋಗಿ ಒಂದೂ ವಾರ ಆಯಿತು. ಆದರಿಂದ ಸಂಪೂರ್ಣವಾಗಿ ವಿದ್ಯುತ್ ಸರಬರಾಜನ್ನು ಬಂದ್ ಮಾಡಿದ್ದಾರೆ. ಏನ್ನೆ ನಾನು ಅದರ ಬಗ್ಗೆ ಸ್ಪಷ್ಟವಾಗಿ ಹೇಳಿದರೂ ತಾವು ಆ ವಿಷಯವನ್ನೇ ಪ್ರಸ್ತಾಪ ಮಾಡಲಿಲ್ಲ. ಕೆ.ಇ.ಬಿ. ಯಲ್ಲಿ ಆಡಳಿತ ಸರಿಯಾಗಿ ನಡೆಯುತ್ತಿಲ್ಲ; ಅವರು ಇದನ್ನು ಬಹಳ ಲಘುವಾಗಿ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ತಮಗೆ ಗೊತ್ತಿರುವ ಹಾಗೆ ದೊಡ್ಡಬಳ್ಳಾಪುರ ಮುಂತಾದ ಕಡೆ ಕೆಲವು ಘಟನೆಗಳು ನಡೆದಿವೆ. ನಮ್ಮಲ್ಲೂ ನಡೆಯುವುದು ಇತ್ತು. ಇದೇ ರೀತಿ ಮುಂದುವರಿದರೆ ಮಾತ್ರ ತಡೆಯುವುದಕ್ಕಾಗುವುದಿಲ್ಲ. ರೈತರಿಗೆ ಬೇಸಿಗೆ ಕಾಲದಲ್ಲಿ ನೀರು ಕೊಡಬೇಕು. ಹಮ್ಮ ಊರಿನಲ್ಲಿ ಸಂಜೆ ೬ಕ್ಕೆ, ೮ಕ್ಕೆ, ೯ಕ್ಕೆ, ಸರಿಯಾಗಿ ವಿದ್ಯುತ್‌ನ್ನು ನಿಲ್ಲಿಸುತ್ತಾರೆ. ಇದರಿಂದ ಅಡಿಗೆ ಮಾಡುವುದಕ್ಕೆ ಮತ್ತು ಹೊಲಕ್ಕೆ ಹೋಗಿ ಬಂದವರಿಗೆ ಊಟ ಮಾಡುವುದಕ್ಕೆ ಎಷ್ಟು ತೊಂದರೆ ಯಾಗುತ್ತದೆಂಬುದನ್ನು ಯೋಚನೆ ಮಾಡಬೇಕು. ಈ ರೀತಿಯಾಗಿ ಎಷ್ಟು ಗಂಟೆಗಳ ಕಾಲ ವಿದ್ಯುತ್ತನ್ನು ನಿಲ್ಲಿಸುತ್ತಾರೆಂಬುದನ್ನು ಲೋಡ್ ಷೆಡ್ಡಿಂಗ್ ಪುಸ್ತಕವನ್ನು ನೋಡಿದರೆ ಗೊತ್ತಾಗುತ್ತದೆ. ನನ್ನ ತಾಲ್ಲೂಕು ಒಂದೇ ಅಲ್ಲ, ಇಡೀ ದೇಶದಲ್ಲಿ ಈ ರೀತಿ ಆಗುತ್ತಿದೆ. ಅವರು ಮಾತನಾಡುವಾಗ ಕೈಗಾರಿಕೆಗಳಿಗೆ ರಾಮಗುಂಡಂನಿಂದ ೫೦ ಮೆಗಾವ್ಯಾಟ್ ವಿದ್ಯುಕ್ ಬರುತ್ತದೆಂದರು. ಅದನ್ನು ರೈತರಿಗೆ ಕೊಟ್ಟು ಅನುಕೂಲ ಮಾಡಿಕೊಡಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಹೆಚ್ ಪಟೇಲ್ (ಮಾನ್ಯ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು).— ರಾಮಗುಂಡಂನಿಂದ ಪವರ್ ಬರುತ್ತಿಲ್ಲ. ಬಹುಶಃ ಸದಸ್ಯರಿಗೆ ವಿಷಯ ಗೊತ್ತಿಲ್ಲವೆಂದು ಕಾಣುತ್ತದೆ. ಮೇಲಾಗಿ ಅವರ ಅಭಿಪ್ರಾಯ ಏನಿದೆ ಅಂದರೆ ಬರೀ ಉದ್ದಿಮೆಗಳಿಗೆ ವಿದ್ಯುಚ್ಛಕ್ತಿ ಕೊಟ್ಟು ರೈತರಿಗೆ ತೊಂದರೆಯಾಗುತ್ತಿದೆ ಎಂದು ಹೇಳುವುದು ತಪ್ಪು ಗ್ರಹಿಕೆ. ನಮ್ಮ ಸರ್ಕಾರ ಬಂದಮೇಲೆ ಭಾರೀ ಉದ್ದಿಮೆ ಗಳಿಗೆ ೭೫ ಪರ್ಸೆಂಟ್ ಕಟ್ ಅನ್ನು ಇಂಪೋಸ್ ಮಾಡಿದ್ದೇವೆ. ೫ ಸಾವಿರ ಕಿಲೋವ್ಯಾಟ್‌ಗಿಂತ ಹೆಚ್ಚು ವಿದ್ಯುತ್‌ನ್ನು ತೆಗೆದುಕೊಳ್ಳುತಕ್ಕ ಎಲ್ಲಾ ಉದ್ದಿಮೆಗಳನ್ನು ಕ್ಲೋಸ್ ಮಾಡುವ ಸ್ಥಿತಿ ಬಂದಿದೆ. ಹಿಂದೆ ಯಾವ ಕಾರಣದಿಂದ ಶೇಕಡ ೭೦ರಷ್ಟು ವಿದ್ಯುಚ್ಛಕ್ತಿಯನ್ನು ಭಾರೀ ಉದ್ದಿಮೆಗಳಿಗೆ ಕೊಟ್ಟರೂ ಮತ್ತು ಶೇಕಡ ೬—೭ ಪರ್ಸೆಂಟನ್ನು ಕೃಷಿಗೆ ಕೊಟ್ಟರು ಎಂದು ಗೊತ್ತಿಲ್ಲ. ಈ ವರ್ಷ ೪೫ ಸಾವಿರ ಪಂಪು ಸೆಟ್ಟುಗಳನ್ನು ಜಾಸ್ತಿ ಮಾಡಿಸಿದ್ದೇವೆ. ಈಗಾಗಲೇ ೩೭ ಸಾವಿರ ಪಂಪುಸೆಟ್ಟುಗಳಿಗೆ ಕನೆಕ್ಷನ್ ಕೊಟ್ಟಿದ್ದೇವೆ. ಸದಸ್ಯರಿಗೆ ಹಳ್ಳಿಗಾಡಿನ ಜನರ ಬಗ್ಗೆ ಎಷ್ಟು ಕಳಕಳಿ ಇದೆಯೋ ಅದಕ್ಕಿಂತ ಈ ಸರ್ಕಾರಕ್ಕೇನೂ ಕಡಿಮೆ ಇಲ್ಲ. ಯಾವ ಉದ್ದಿಮೆಗ ಳನ್ನೂ ಸ್ಥಗಿತಗೊಳಿಸುವುದಕ್ಕೆ ಹೋಗಿಲ್ಲ. ಅವರಿಗೆ ಮಾರ್ಜಿನಲ್ ಆಗಿ ಪವರ್ ಕಟ್ ಮಾಡಿದ್ದೇವೆ. ಷೆಡ್ಯೂಲ್ ಪ್ರಕಾರ ೪ ಗಂಟೆ ಅಂದರೆ ಬೆಳಿಗ್ಗೆ ೬ ರಿಂದ ೧೦ ರವರೆಗೆ ಪವರ್ ಕಟ್ ಆಗುತ್ತದೆ. ನಂತರ ೧೧ ಗಂಟೆಗೆ ಅಥವಾ ೬ ಗಂಟೆಗೆ ಅನೌನ್ಸ್ ಮಾಡದೆ ಇದ್ದರೂ ಲೋಡ್ ಷೆಡ್ಡಿಂಗ್ ಆಗುತ್ತದೆ. ವಿತಕ್ಕೆಂಬುದನ್ನು ಹೋದಸಾರಿ ವಿವರಿಸಿದ್ದೇನೆ. ಏಕೆಂದರೆ ಈ ವರ್ಷ ಅಂದರೆ ೧೯೮೫-೮೬ರಲ್ಲಿ ೪೦೦ ಮೆಗಾವ್ಯಾಟ್ ವಿದ್ಯುತ್ತಿನ ಬೇಡಿಕೆ ಜಾಸ್ತಿಯಾಗಿದೆ. ನಾವು ಇವತ್ತು ಕಾರ್ಖಾನೆಗಳಿಗೆ ೭೫ ಪರ್ಸೆಂಟ್ ಪವರ್ ಕಟ್ ಅನ್ನು ಇಂಪೋಸ್ ಮಾಡಿದ್ದರೂ ೬ ರಿಂದ ೯ ಗಂಟೆಯವರೆಗೆ ಮ್ಯಾಕ್ಸಿಮಂ ಲೋಡ್ ಬರುತ್ತದೆ. ಆ ವೇಳೆಯಲ್ಲಿ ಅದಷ್ಟು ಕಾರ್ಖಾನೆಗಳನ್ನೂ ರನ್ ಮಾಡಬೇಡಿ ಎಂದು ಹೇಳಿದ್ದರೂ ಮಾಡುತ್ತಾರೆ. ೨೫೦ ಕಿಲೋವ್ಯಾಟ್ ವಿದ್ಯುತ್ ಬಳಸುವವರಿಗೇನೂ ಪವರ್ ಕಟ್ ಅನ್ನು ಇಂಪೋಸ್ ಮಾಡಿಲ್ಲ. ಅವರು ತಮ್ಮ ಕೆಲಸವನ್ನು ತಾವು ಮಾಡುತ್ತಿರುತ್ತಾರೆ. ಅದನ್ನು ಕಂಟ್ರೋಲ್ ಮಾಡುವುದಕ್ಕೆ ಯಾವುದೇ ವ್ಯವಸ್ಥೆ ಇಲ್ಲ. ಯಾವುದೋ ಒಂದು ಕಡೆ ಅಲ್ಯೂಮಿನಿಯಂ ಕಾರ್ಖಾನೆಯುಪಯೋಗಿಸತಕ್ಕ ವಿದ್ಯುತ್ತನ್ನು ಕಂಟ್ರೋಲ್ ಮಾಡಬೇಕೆಂದರೆಇಡೀ ಬೆಳಗಾಂ ಸಿಟಿಯ ಸ್ವಿಚ್ ಆಫ್‌ಆಗುತ್ತದೆ. ಈ ಕಾರಣದಿಂದ ಮಾಡುವುದಕ್ಕಾಗುತ್ತಿಲ್ಲ. ನಾನು ಧಾರವಾಡ ಪ್ರದೇಶಕ್ಕೆ ಹೋಗಿದ್ದಾಗ ಅಲ್ಲಿನ ರೈತರನ್ನು ಕೇಳಿದೆ, ಅವರು ಹೇಳಿದರು, ನೀವು ೪ ಅಲ್ಲ ೬ ಗಂಟೆ ಲೋಡ್ ಷೆಡ್ಡಿಂಗ್ ಮಾಡಿ, ಆದರೆ ಇಂಟರಪ್‌ಷನ್ಸ್ ಬೇಡ ಎಂದು ಹೇಳಿದರು. ಆದರೆ ಇಂಟರಪ್‌ಷನ್ಸ್ ಅನಿವಾರ್ಯವಾಗಿದೆ. ಯಾವುದೇ ದೇಶದಿಂದ ಇಂಜಿನಿಯರುಗಳನ್ನು ಕರೆಸಿದರೂ ಇಂಟರಪ್‌ಷನ್ಸ್, ಆಗದಂತೆ ಮಾಡುವುದಕ್ಕಾಗುತ್ತಿಲ್ಲ, ಪ್ರಾಯೋಗಿಕವಾಗಿ ಇದರಲ್ಲಿ ಯಾರಿಗೂ ಫೇವರ್ ಮಾಡುವುದಕ್ಕೆಹೋಗಿಲ್ಲ,

ಶ್ರೀ ಎನ್. ಚಿಕ್ಕೇಗೌಡ.— ಸಾವಿರಾರು ರೂಪಾಯಿಗಳು ನಷ್ಟವಾಗುತ್ತಿವೆ.....

ಅಧ್ಯಕ್ಷರು.— ಇದೇನು ಚರ್ಚೆಯೆ ?

ಶ್ರೀ ಎ. ಲಕ್ಷ್ಮೀಸಾಗರ್.— ಶಿವಮೂರ್ತಿಯವರು ಬೆಳಿಗ್ಗೆ ರೂಲ್ ೩೩ರಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ೩-೪-೮೪ರಂದು ದಾವಣಗೆರೆ ತಾಲೂಕಿನ ಸಿದ್ದನಂಜಪ್ಪನವರ ಬಾವಿಯಲ್ಲಿ ಕೆಲಸ ಮಾಡುತ್ತಿದ್ದಾಗ ಬಾವಿ ಕುಸಿದು ಬಿದ್ದು ಇಬ್ಬರು ಮಣ್ಣಿನಲ್ಲಿ ಸಿಕ್ಕಿದರು ಎಂದು ಹೇಳಿದರು. ಆಲ್ಲಿ ಜಾಗ ಇಕ್ಕಟ್ಟಾಗಿದ್ದುದರಿಂದ ಮೃತ ದೇಹವನ್ನು ಕೂಡಲೇ ಎತ್ತಲಾಗಲಿಲ್ಲ. ಕೊನೆಗೆ ಕ್ರೇನ್ ಸಹಾಯ ಪಡೆದು ೬-೪-೮೪ರಂದು ಆ ದೇಹಗಳನ್ನು ತೆಗೆಯಲಾಯಿತು. ಅವರಿಬ್ಬರೂ ಕೃಷಿ ಕಾರ್ಮಿಕರಾಗಿರುವುದರಿಂದ ಅವರ ಕುಟುಂಬದವರಿಗೆ ತಲಾ ಎರಡು ಸಾವಿರ ರೂಪಾಯಿಗಳನ್ನು ಪರಿಹಾರ ಧನವಾಗಿ ನೀಡಲಾಗುವುದು.

Announcement

MR. SPEAKER.-- I have received the following message As required under rule 144 of the Rules of Procedure and Conduct of Business in the Karnataka Legislative Council I send herewith the following bills which have been agreed to by the Legislative Council without amendments.

1. The Mysore (Religious and Charitable) Inams Abolition (Krnataka Amendment) Bill, 1984.

2 The Registration (Karnataka Amendment) Bill, 1984.

3. The Karnataka Municipal Corporations and Certain other Laws (Amendment) Bill, 1984.

Motion to consideration

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೇ, ನಿನ್ನೆ ನಾನು ಒಂದು ವಿಷಯ ಪ್ರಸ್ತಾಪ ಮಾಡಿದ್ದೆ.

ಅಧ್ಯಕ್ಷರು.—೩೩ನೇ ನಿಯಮದ ಪ್ರಸ್ತಾಪ ಆಗಿಹೋಯಿತು.

ಶ್ರೀ ಭೀಮಣ್ಣ ಖಂಡ್ರೆ.—ನಿನ್ನೆ ನಾನು ಪ್ರಸ್ತಾಪ ಮಾಡಿದ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳು ಅಶ್ಯೂರೆನ್ಸ್ ಕೊಟ್ಟಿದ್ದಾರೆ. ತಾವೂ ಕೊಟ್ಟಿದ್ದೀರಿ. ತಾವು ಅಂದರೆ ಸ್ಪೀಕರ್ ಅವರು. ನಿಮ್ಮ ತಾರೀಖಿ ಬೀದರ್‌ನಲ್ಲಿ ಸತ್ಯಾಗ್ರಹ ಪ್ರಾರಂಭ.....

ಅಧ್ಯಕ್ಷರು.—ನಾನು ಏನೂ ಅಶ್ಯೂರೆನ್ಸ್ ಕೊಟ್ಟಿಲ್ಲ.

ಶ್ರೀ ಭೀಮಣ್ಣ ಖಂಡ್ರೆ.—ನಾನು ಚೇರ್ ಅಶ್ಯೂರೆನ್ಸ್ ಕೊಟ್ಟಿದ್ದಾರೆಂದು ಹೇಳುತ್ತಿದ್ದೇನೆಯೆ ಹೊರತು ಮಾನ್ಯ ಚಂದ್ರೇಗೌಡರು ಎಂದು ಹೇಳಲಿಲ್ಲ.

ಅಧ್ಯಕ್ಷರು.—ಕಡತ ತರಿಸಿ ನೋಡೋಣ.

ಶ್ರೀ ಭೀಮಣ್ಣ ಖಂಡ್ರೆ.—ಸ್ವಲ್ಪ ಕೇಳಿರಿ. ಸ್ಪೀಕರ್ ಅಶ್ಯೂರೆನ್ಸ್ ಕೊಟ್ಟಿದ್ದಾರೆ. Si the Speaker has assured.

MR. SPEAKER.—No, No You cannot say like that.

ಶ್ರೀ ಭೀಮಣ್ಣ ಖಂಡ್ರೆ.—ಆಲ್ಲಿ ಸತ್ಯಾಗ್ರಹ ನಡೆಯುತ್ತಿದೆ. ಈ ಬಗ್ಗೆ ಉತ್ತರ ಕೊಡಬೇಕಾದೇವೇಗೌಡರು ನಾನು ಹೇಳುವಾಗ ನಾಳೆ ಉತ್ತರ ಕೊಡಿಸುತ್ತೇನೆ ಎಂದು ಹೇಳಿದ್ದಾರೆ.

ಅಧ್ಯಕ್ಷರು.—ಲಿಜಿಸ್ಲೇಟಿವ್ ಬಿಸಿನೆಸ್‌ಗೆ ಹೋಗೋಣ. ಸಂಬಂಧಪಟ್ಟ ಮಂತ್ರಿಗಳು ಇದ್ದಾರೆ ನಾನೇನು ಮಾಡಲಿ ? ಶಿಕ್ಷಣ ಮಂತ್ರಿಗಳು ಪ್ರಸ್ತಾಪವನ್ನು ಮಂಡಿಸಬೇಕು.